೩. ಸರ್ಕಾರವು ಈ ಉದ್ದಿಮೆಯಲ್ಲಿ ಕೆಲಸ ಮಾಡುವ ಕಾರ್ಮಿಕರ ಶೋಷಣೆಯನ್ನು ತಡೆಗಟ್ಟುವ ದಿಶೆಯಲ್ಲಿ ಕನಿಷ್ಟ ವೇತನವನ್ನು ನಿಗದಿಪಡಿಸುವ ಬಗ್ಗೆ ಕಾರ್ಯೋನ್ಮುಖವಾಗಿದೆ.

ರಾಜ್ಯದಲ್ಲಿ ಕನಿಷ್ಠ ವೇತನ ನಿಗದಿಪಡಿಸಿದ ಉದ್ದಿಮೆಗಳು

೨೪೮೮. ಶ್ರೀ ಆರ್. ವೆಂಕಟರಾಮಯ್ಯ, (ಮುಳಬಾಗಿಲು).— ಮಾನ್ಯ ಕಾರ್ಮಿಕ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ೧೯೮೬-೮೭, ಮತ್ತು ೧೯೮೭-೮೮ನೇ ಸಾಲಿನಲ್ಲಿ ರಾಜ್ಯದಲ್ಲಿ ಕನಿಷ್ಟ ವೇತನ ನಿಗದಿಪಡಿಸಿದ ಉದ್ದಿಮೆಗಳೆಷ್ಟು ? (ಉದ್ದಿಮೆವಾರು ಅಂಕಿಅಂಶಗಳನ್ನು ಒದಗಿಸುವುದು) ?

ಆ) ಕನಿಷ್ಟ ವೇತನ ಜಾರಿಗೊಳಿಸಲು ಪ್ರತ್ಯೇಕವಾಗಿ ಏಜೆನ್ಸಿಯನ್ನು ಸರ್ಕಾರ ನಿಯಮಿಸಿದೆಯೇ ?

ಶ್ರೀ ಎಸ್. ಕೆ. ಕಾಂತ (ಕಾರ್ಮಿಕ ಸಚಿವರು).—

ಅ) ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಈ ಕೆಳಕಂಡ ಉದ್ದಿಮೆಗಳಿಗೆ ಕನಿಷ್ಟ ವೇತನವನ್ನು ನಿಗದಿಮಾಡಲಾಗಿದೆ:—

೧೯೮೬-೮೭; ೧. ಇಂಜಿನಿಯರಿಂಗ್ ಉದ್ದಿಮೆ
೨. ಹೆಂಚಿನ ಉದ್ದಿಮೆ

೧೯೮೭-೮೮; ೧. ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳು
೨. ಆಸ್ಪತ್ರೆಗಳು
೩. ಬೇಕರಿಗಳು
೪. ಕನ್‌ಫೆಕ್ಷನರಿಗಳು
೫. ಕ್ಲಬ್‌ಗಳು

ಆ) ಕಾರ್ಮಿಕ ಇಲಾಖೆಯ ಅಧಿಕಾರಿಗಳು ಮತ್ತು ನಿರೀಕ್ಷಕರ ಜೊತೆಗೆ ಕಂದಾಯ ಇಲಾಖೆಯ ರೆವಿನ್ಯೂ ಇನ್ಸ್‌ಪೆಕ್ಟರ್‌ರವರನ್ನು ಸಹ ವ್ಯವಸಾಯ ಕಾರ್ಮಿಕರ ಕನಿಷ್ಟ ವೇತನವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವುದಕ್ಕಾಗಿ ಕನಿಷ್ಟ ವೇತನ ಕಾಯ್ದೆಯನ್ವಯ ನಿರೀಕ್ಷಕರನ್ನಾಗಿ ನೇಮಿಸಲಾಗಿದೆ.

ಸಭೆಯಲ್ಲಿ ಮಂಡಿಸಲಾದ ಕಾಗದಪತ್ರಗಳು

ಶ್ರೀ ಜೀವರಾಜ ಆಳ್ವ (ಉನ್ನತ ಶಿಕ್ಷಣ ಮಂತ್ರಿ).— ೧೯೭೬ನೇ ಇಸವಿಯ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯಗಳ ಶಾಸನದ ೪೫(೨)ನೇ ಕಲಮಿನ ಮೇರೆಗೆ ೧೯೮೪-೮೫ ಮತ್ತು ೧೯೮೫-೮೬ನೇ ಇಸವಿಯ ಮಂಗಳೂರು ವಿಶ್ವವಿದ್ಯಾನಿಲಯದ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ರೇಷ್ಮೆ ಸಚಿವರು);—ಮಾನ್ಯ ಶ್ರೀ ಹೆಚ್. ವಿಶ್ವನಾಥಯ್ಯನವರ ಹೆಸರಿನ ಮುಂದಿರುವ ೧೯೫೬ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ ಶಾಸನದ ೧೫೯ನೇ ಕಲಮಿನ ಮೇರೆಗೆ ೧೯೮೮ನೇ ಇಸವಿಯ ಕರ್ನಾಟಕ ಸಹಕಾರ ಸಂಘಗಳ (ತಿದ್ದುಪಡಿ) ನಿಯಮಾವಳಿ ಬಗ್ಗೆ ದಿನಾಂಕ ೭ನೇ ಮಾರ್ಚಿ ೧೯೮೮ರಂದು ಹೊರಡಿಸಲಾದ ಸಿ.ಎಂ.ಡಬ್ಲ್ಯು ೨೪೪ ಸಿ.ಎಲ್.ಎಲ್. ೮೮ನೇ ಕ್ರಮಾಂಕದ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಮಾನ್ಯ ಶ್ರೀ ಮಹಮದ್ ಮೊಯಿನುದ್ದೀನ್‌ರವರ ಹೆಸರಿನ ಮುಂದಿರುವ ೧೯೫೯ನೇ ಇಸವಿಯ ಕಂಪನಿಗಳ ಶಾಸನದ ೬೨೯(ಎ)ನೇ ಕಲಮಿನ ಮೇರೆಗೆ ಕರ್ನಾಟಕ ಹೈನುಗಾರಿಕೆ ಅಭಿವೃದ್ಧಿ ನಿಗಮದ ನಿಯಮಿತದ ೧೯೮೪-೮೫ನೇ ಸಾಲಿನ ೧೧ನೇ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಕಾರ್ಯದರ್ಶಿ;—ಕರ್ನಾಟಕ ವಿಧಾನ ಪರಿಷತ್ತಿನಿಂದ ಅಂಗೀಕಾರವಾದ ರೂಪದಲ್ಲಿರುವ ೧೯೮೮ನೇ ಇಸವಿಯ ಕರ್ನಾಟಕ ಕಾನೂನು ನೆರವು ಮಂಡಳಿಯ ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ

ಉಪಾಧ್ಯಕ್ಷರು;—ಕಾಗದ ಪತ್ರಗಳನ್ನು ಮಂಡಿಸಲಾಯಿತು.

ಗಮನ ಸೆಳೆಯುವ ಸೂಚನೆ

೧) ಹಾನಗಲ್ ತಾಲ್ಲೂಕಿನ ಶೇಷಗಿರಿಯಲ್ಲಿ ಹಿಂದುಳಿದ ವರ್ಗದವರಿಗೆ ಹಾಸ್ಟಲನ್ನು ಮಂಜೂರು ಮಾಡುವಲ್ಲಿ ವಿಳಂಬವಾಗಿರುವುದು.

ಶ್ರೀ ಕೆ. ಹೆಚ್. ಪಾಟೀಲ್.—ಧಾರವಾಡ ಜಿಲ್ಲೆಯ ಹಾನಗಲ್ ತಾಲ್ಲೂಕು ಶೇಷಗಿರಿಯಲ್ಲಿ ಹಿಂದುಳಿದ ವರ್ಗದವರಿಗಾಗಿ ಹಾಸ್ಟೆಲ್‌ನ್ನು ಮಂಜೂರು ಮಾಡುವಲ್ಲಿ ಆಗಿರುವ ವಿಳಂಬದ ಬಗ್ಗೆ ಸಮಾಜ ಕಲ್ಯಾಣ ಮಂತ್ರಿಯವರ ಗಮನ ಸೆಳೆಯುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು)—ಮಾನ್ಯ ಪಾಟೀಲ್‌ರವರು ಧಾರವಾಡ ಜಿಲ್ಲೆಯಲ್ಲಿ ಹಾನಗಲ್ ತಾಲ್ಲೂಕಿನ ಶೇಷಗಿರಿಯಲ್ಲಿ ಗ್ರಾಂಟ್ ಇನ್ ಏಡ್ ಹಾಸ್ಟೆಲ್‌ನ್ನು ಹಿಂದುಳಿದ ವರ್ಗಗಳವರ ಮಕ್ಕಳಿಗಾಗಿ ಮಂಜೂರು ಮಾಡಬೇಕೆಂದು ಬಹಳ ದಿವಸಗಳಿಂದ ಕೇಳುತ್ತಿದ್ದೇನೆಂದು ಹೇಳಿದ್ದಾರೆ. ಆ ಬಗ್ಗೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ. ಆದಷ್ಟು ಬೇಗ ಹಿಂದುಳಿದ ವರ್ಗಗಳವರ ಮಕ್ಕಳಿಗೆ ಅನುಕೂಲವಾಗುವಂತೆ ಖಾಸಗಿ ಅನುದಾನ ವಿದ್ಯಾರ್ಥಿನಿಲಯವನ್ನು ಕೊಡಲಾಗುತ್ತದೆ.

ಶ್ರೀ ಎ. ಲಕ್ಷ್ಮೀಸಾಗರ್.—ಶ್ರೀ ಡಿ. ಟಿ. ಜಯಕುಮಾರ್, ಚಿಕ್ಕಬೋರಯ್ಯ ಹಾಗೂ ವೇದಾಂತ ಹೆಬ್ಬಿಗೆಯವರು ಗಮನ ಸೆಳೆದಿರುವ ವಿಚಾರವನ್ನು ಮಂತ್ರಿಗಳು ಬಂದ ಮೇಲೆ ತೆಗೆದುಕೊಳ್ಳಿ.

೨) ನಗರ ಯೋಜನೆಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಹಾಗೂ ಬಡ್ತಿ ಮಾಡುವಲ್ಲಿ ನಿಮ್ನ ವರ್ಗದವರಿಗೆ ಅನ್ಯಾಯವಾಗಿರುವುದು.

ಶ್ರೀ ಬಿ. ಬಸವಲಿಂಗಪ್ಪ.—ಕರ್ನಾಟಕ ರಾಜ್ಯದ ನಗರ ಯೋಜನೆಯ ಇಲಾಖೆಯಲ್ಲಿ ಖಾಲಿಯಿರುವ ಹುದ್ದೆಗಳನ್ನು ನೇಮಕಾತಿ ಮಾಡುವಲ್ಲಿ ಹಾಗೂ ಬಡ್ತಿ ನೀಡುವಲ್ಲಿ ನಿಮ್ನ ವರ್ಗದ ಹಾಗೂ ಪಂಗಡದವರಿಗೆ ಆದ ಅನ್ಯಾಯದ ಬಗ್ಗೆ ನಗರಾಭಿವೃದ್ಧಿ ಹಾಗೂ ಲೋಕೋಪಯೋಗಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಚಂದ್ರಶೇಖರ್ (ಲೋಕೋಪಯೋಗಿ ಹಾಗೂ ನಗರಾಭಿವೃದ್ಧಿ ಸಚಿವರು).—

೧. ನಗರ ಯೋಜನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇಮಕಾತಿ :

ಸರ್ಕಾರಿ ಆದೇಶದ ಕ್ರ ಸಂ. ಡಿಪಿಎಆರ್-೧-ಎಸ್‌ಬಿಸಿ-೭೭, ದಿನಾಂಕ ೪-೩-೧೯೭೭ ಅನ್ವಯ ಈ ಇಲಾಖೆಯಲ್ಲಿ ಖಾಲಿ ಬಿದ್ದ ಹುದ್ದೆಗಳನ್ನು ನಿಮ್ನ ವರ್ಗ ಮತ್ತು ಇತರ ವರ್ಗಗಳಿಗೆ ನಿರ್ಧರಿಸಿದ ಮೀಸಲಾತಿಯ ವಿಂಗಡಿಸಿ, ಕರ್ನಾಟಕ ಲೋಕಸೇವಾ ಆಯೋಗ ಹಾಗೂ ನೇಮಕಾತಿ ಸಮಿತಿಗಳಿಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ. ಅರ್ಹರಾದ ಅಭ್ಯರ್ಥಿಗಳ ಪಟ್ಟಿಯ ಅನ್ವಯ ನೇಮಕಾತಿ ಮಾಡಲಾಗಿದೆ. ಅದೇ ರೀತಿ 'ಡಿ' ದರ್ಜೆಗೆ ಸೇರಿದ ಹುದ್ದೆಗಳನ್ನು ಸರ್ಕಾರಿ ಆದೇಶದ ದಿನಾಂಕ ೪-೩-೭೭ರ ಅನ್ವಯ ವಿಂಗಡಿಸಿ, ಜಿಲ್ಲಾ ವಿನಿಮಯ ಉದ್ಯೋಗ ಸಂಸ್ಥೆಯಿಂದ ಅರ್ಹರಾದ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ನೇಮಕಾತಿ ಮಾಡಲಾಗಿದೆ.

ಆದ್ದರಿಂದ ನಗರ ಯೋಜನಾ ಇಲಾಖೆಯಲ್ಲಿ ಖಾಲಿ ಹುದ್ದೆಗಳ ನೇಮಕಾತಿಯಲ್ಲಿ ಯಾವ ನಿಯಮದ ಉಲ್ಲಂಘನೆ ಮಾಡಿರುವುದಿಲ್ಲ.